**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No.2583/2023**

**CW- 16** **PW:11**

ಸಾಕ್ಷಿಯ ಹೆಸರು ಃ ಮಹಾದೇವಪ್ಪ ದೂಳಿಕೊಪ್ಪ
ತಂದೆ /ಗಂಡನ ಹೆಸರು ಃ ರಾಮಚಂದ್ರ
ವಯಸ್ಸು ಃ 37 ವರ್ಷ
ಉದ್ಯೋಗ ಃ ಕೂಲಿ ಕೆಲಸ
ವಾಸಸ್ಥಳ ಃ ತಡಸಿನಕೊಪ್ಪ, ಧಾರವಾಡ

ದಿಃ **06.02.2025.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ**

ಆರೋಪಿ ನಂ.1 ನನಗೆ ಪರಿಚಯ. ಆರೋಪಿ ನಂ.1 ಬುಲೆರೊ ಸಂಖ್ಯೆ ಕೆಎ-32/ಎಮ್-8733 ಇದನ್ನು 2021 ರಲ್ಲಿ ನನಗೆ ಖರೀದಿಗೆ ನೀಡಿದ್ದರು. ಖರೀದಿ ಮಾಡಿ ಒಂದು ವರ್ಷದ ನಂತರ ಫಿರ್ಯಾದಿ ಸಲ್ಲಿಸಲಾಗಿದೆ ಎಂದು ನನಗೆ ಗೂತ್ತಾಯಿತು. ಫೆನಾನ್ಸ ನವರು ಆರೋಪಿ ನಂ.1 ಅವರಿಗೆ ಮೋಸ ಮಾಡಿರುತ್ತಾರೆಂದು ಫಿರ್ಯಾದಿ ನೀಡಿರುತ್ತಾರೆಂದು ನನಗೆ ಗೊತ್ತಾಯಿತು. ನಂತರ ಗೋಕುಲ ರಸ್ತೆಯಲ್ಲಿರುವ ಕಚೇರಿಗೆ ಹೋಗಿ ನಾನು ನನ್ನ ಬುಲೆರೊ ವಾಹನ ಕೊಟ್ಟು ಬಂದಿರುತ್ತೇನೆ. ಆರೋಪಿ ನಂ.1 ಇವರ ಕಡೆಯಿಂದ ಬುಲೆರೋ ವಾಹನ ಖರೀದಿಸುವ ಸಮಯದಲ್ಲಿ ನಾನು ದಾಖಲೆ ಪರಿಶೀಲನೆ ಮಾಡಿ ಅದರ ಮೇಲೆ ಸಾಲ ಇಲ್ಲ ಎಂದು ತಿಳಿದುಕೊಂಡಿದ್ದೆನು. ಸಾಕ್ಷಿ ಬುಲೆರೊ ವಾಹನ ಜಪ್ತಿ ಪಂಚನಾಮೆ ತೊರಿಸಲಾಗಿ ಸಾಕ್ಷಿ ಅದರಲ್ಲಿ ತನ್ನ ಸಹಿ ಇದೆ ಎಂದು ಒಪ್ಪಿಕೊಂಡಿದ್ದು ಸದರಿ ಪಂಚನಾಮೆಯನ್ನು ನಿಪಿ.26 ಎಂದು, ಸಾಕ್ಷಿಯ ಸಹಿಯನ್ನು ನಿಪಿ.26(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಪೊಟೊ ತೊರಿಸಲಾಗಿ ಸದರಿ ಪೊಟೋವನ್ನು ತನ್ನ ಬುಲೆರೊ ವಾಹನವನ್ನು ಪೊಲೀಸರಿಗೆ ನೀಡಿರುವ ಸಮಯದಲ್ಲಿ ತೆಗೆದಿರುತ್ತಾರೆಂದು ಗುರುತಿಸಿದ್ದು ಅದನ್ನು ನಿಪಿ.27 ಎಂದು ಗುರುತಿಸಲಾಯಿತು. ಈ ಪ್ರಕರಣದ ವಿಷಯವಾಗಿ ನಾನು ತನಿಖಾಧಿಕಾರಿಯವರಿಗೆ ಯಾವದೇ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎ.ಪಿ.ಪಿ. ಯವರಿಂದಃ**

ನಿಪಿ.26 ಪಂಚನಾಮೆಯನ್ನು ದಿಃ 02.09.2022 ರಂದು ಬೆಳಿಗ್ಗೆ 11.00 ಯಿಂದ 12.00 ಗಂಟೆ ಅವಧಿಯಲ್ಲಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಸುಮಾರು 10.30 ಯಿಂದ 11 ಗಂಟೆ ಸಮಯದಲ್ಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

**ಪಾಟಿಸವಾಲುಃ ಆರೋಪಿ ನಂ.1 ಪರ ವಕೀಲರಿಂದಃ**

ನನಗೆ ಓದಲು ಬರೆಯಲು ಬರುವುದಿಲ್ಲ. ನಿಪಿ.26 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಆರೋಪಿ ನಂ.1 ಇವರ ಕಡೆಯಿಂದ ನಾನು ಬುಲೆರೊ ವಾಹನ ಖರೀದಿಸುವಾಗ ಅವರು ಅದರ ಆರ್ ಸಿ ಬುಕ್ ಹಾಗೂ ಇನ್ಸುರನ್ಸ ಪಾಲಿಸಿ ನೀಡಿದ್ದರು. ಸದರಿ ದಾಖಲೆಗಳನ್ನು ಪೊಲಿಸರಿಗೆ ನೀಡಿಲ್ಲ. ಬುಲೆರೊ ವಾಹನ ಸಾಲ ತೀರಿಸಿರುತ್ತಾರೆ ಅಥವಾ ಇಲ್ಲ ಎಂದು ನೀವು ಸದರಿ ವಾಹನದ ಕಂಪನಿ ಹತ್ತಿರ ಕೇಳಿರುತ್ತೀರಾ ಎಂದರೆ ಸಾಕ್ಷಿ ಆರೋಪಿ ನಂ.1 ತೊರಿಸಿದ ದಾಖಲೆಗಳ ಪ್ರಕಾರ ಬುಲೆರೊ ವಾಹನ ಮೇಲೆ ಯಾವದೇ ಸಾಲ ಇರಲಿಲ್ಲ ಹಾಗಾಗಿ ಕೇಳುವ ಪ್ರಸಂಗ ಬರಲಿಲ್ಲ. ನಾನು ಪೊಲಿಸರ ಹಾಗೂ ಫೈನಾನ್ಸ ನವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ಇಲ್ಲ ನನಗೆ ಮೋಸ ಆಗಿದೆ ಎಂದು ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದು ನುಡಿಯುತ್ತಾರೆ.

**ಆರೋಪಿ ನಂ.2 ಪರ ವಕೀಲರು ಪಾಟಿಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

(ಶ್ರೀಮತಿ ದೀಪಾ ಜಿ ಮನೇರಕರ)

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.